ಇಶಾಂತ್ ಶರ್ಮ, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ ಇವರೆಲ್ಲ ಕಳೆದ ಒಂದೆರಡು ದಶಕಗಳಲ್ಲಿ ಭಾರತದ ವೇಗದ ಬೌಲಿಂಗ್ ಕುರಿತು ಆಗೀಗ ಭರವಸೆಗಳನ್ನು ಉಳಿಸುತ್ತಾ ಬಂದ ಪ್ರಮುಖರು.

ಈಗ ಕಾಲ ಬದಲಾಗಿದೆ ಎನ್ನುವುದನ್ನು ತಲೆ ಮೇಲೆ ಹೊಡೆದಂತೆ ಹೇಳಿದ್ದು ಜಸ್ಪ್ರೀತ್ ಬುಮ್ರಾ. ವಿಶ್ವದ ನಂಬರ್ ಒನ್ ಬೌಲರ್‌ಗಳ ಪಟ್ಟಿಗೆ ಬಲು ಬೇಗ ಸೇರಿದ ಬುಮ್ರಾ, ತಮ್ಮ ವಿಲಕ್ಷಣವೂ ವೈವಿಧ್ಯವೂ ಪರಮ ವೇಗವೂ ಬೆರೆಸಿದ ಬೌಲಿಂಗ್ ಶೈಲಿಯಿಂದಲೇ ಎದುರಾಳಿಗಳ ಜಂಘಾಬಲ ಉಡುಗಿಸಿದವರು. ಆದರೆ, ಬೆನ್ನಿನ ಭಾಗದ ಮೇಲೆ ಹೆಚ್ಚು ಒತ್ತಡ ಹಾಕಿ ಬೌಲಿಂಗ್ ಮಾಡುವ ಶೈಲಿಯಿಂದಾಗಿಯೇ ಇವರು ಪದೇ ಪದೇ ನೋವಿಗೆ ಈಡಾದರು. ಹೀಗಾಗಿ ಇತ್ತೀಚೆಗೆ ಅವರು ತಂಡದ ಪರವಾಗಿ ನಿರಂತರವಾಗಿ ಆಡಲು ಕೂಡ ಸಾಧ್ಯವಾಗುತ್ತಿಲ್ಲ. ಕಾಲ ಕಳೆದಂತೆ, ಅವರಿಂದ ಟೆಸ್ಟ್ ಕ್ರಿಕೆಟ್‌ನಲ್ಲಿ ದೊಡ್ಡ ಸ್ಪೆಲ್ ಹಾಕಿಸುವುದೂ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಅವರ ಉತ್ತರಾಧಿಕಾರಿ ಯಾರು ಎನ್ನುವ ಪ್ರಶ್ನೆಗೆ ಉತ್ತರರೂಪದಂತೆ ಮಯಂಕ್ ಯಾದವ್ ಕಾಣುತ್ತಿದ್ದಾರೆ.


ಆರ್‌ಸಿಬಿ ವಿರುದ್ಧ ಅಪೀಲ್ ಮಾಡಿದ ಕ್ಷಣ

ಆರು ವರ್ಷದ ಹಿಂದೆ ದೆಹಲಿಯ ಸಾನೆಟ್ ಕ್ಲಬ್‌ನ ನೆಟ್ಸ್‌ನಲ್ಲಿ ತಾರಕ್ ಸಿನ್ಹ ಕಣ್ಣಿಗೆ ಈ ಪ್ರತಿಭೆ ಬಿದ್ದಿದ್ದನ್ನು ಹಿರಿಯ ಕ್ರಿಕೆಟ್ ಬರಹಗಾರ ವಿಜಯ್ ಲೋಕಪಲ್ಲಿ ಇತ್ತೀಚೆಗೆ ನೆನಪಿಸಿಕೊಂಡಿದ್ದರು. ಸತತವಾಗಿ ಒಂದೇ ವೇಗದಲ್ಲಿ ಎಸೆತಗಳನ್ನು ನೆಟ್ಸ್‌ನಲ್ಲಿ ಹಾಕುತ್ತಿದ್ದ ಮಯಂಕ್‌ಗೆ ಯಾವುದೇ ಶುಲ್ಕವನ್ನು ಕ್ಲಬ್‌ಗೆ ಕಟ್ಟದಂತೆ ತಾರಕ್ ಮಾಫಿ ಮಾಡಿಸಿದರು. ತಾರಕ್ ಅವರ ಸಹಾಯಕ ದೇವೇಂದ್ರ ಶರ್ಮ ಕಣ್ಣುಗಳನ್ನು ಮಯಂಕ್ ಮೇಲೆ ಸದಾ ನೆಟ್ಟಿರುವಂತೆ ಮಾಡಿದ್ದೇ ಆ ಪ್ರಸಂಗ. ದೇಶದ ಭವಿಷ್ಯದ ದೃಷ್ಟಿಯಿಂದ ಈ ಬೌಲರ್ ಮೇಲೆ 'ಹೂಡಿಕೆ' ಮಾಡಬೇಕು ಎನ್ನುವ ಪ್ರಜ್ಞೆ ದೇವೇಂದ್ರ ಅವರಲ್ಲೂ ಜಾಗೃತವಾಯಿತು.

ಪೊಲೀಸ್ ವಾಹನಗಳಿಗೆ ಸೈರನ್‌ಗಳು ಹಾಗೂ ಲೈಟ್‌ಗಳನ್ನು ಪೂರೈಸುವ ತಮ್ಮದೇ ಸ್ವಂತ ವ್ಯಾಪಾರವನ್ನು ಪ್ರಭು ಯಾದವ್ ನಡೆಸುತ್ತಾರೆ. ಇವರು ಮಯಂಕ್ ತಂದೆ. ಮೊದಲಿನಿಂದಲೂ ಅವರಿಗೆ ಮಗ ವೇಗದ ಬೌಲರ್ ಆಗಬೇಕು ಎನ್ನುವ ಮಹದಾಸೆ ಇತ್ತು. ಪಶ್ಚಿಮ ದೆಹಲಿ ಕ್ಲಬ್‌ಗೆ ಎಡತಾಕಿದರು. ಮಗನನ್ನು ಅಲ್ಲಿ ಒಳಗೂ ಬಿಟ್ಟುಕೊಳ್ಳಲಿಲ್ಲ. ಅಲ್ಲಿಂದ ಸೀದಾ ಸಾನೆಟ್ ಕ್ಲಬ್‌ಗೆ ಬಂದರು. ತಾರಕ್ ಸಿನ್ಹ ಯಾವತ್ತೂ ಪ್ರತಿಭೆಗಳಿಗೆ ಮೋಸ ಮಾಡುವುದಿಲ್ಲ ಎನ್ನುವ ಅಭಿಪ್ರಾಯವಿದೆ. ಅದು ಆ ದಿನ ಸುಳ್ಳಾಗಲಿಲ್ಲ.

2021ರ ಡಿಸೆಂಬರ್‌ನಲ್ಲಿ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ ದೆಹಲಿ ತಂಡವನ್ನು ಪ್ರತಿನಿಧಿಸಲು ಮಯಂಕ್‌ಗೆ ಅವಕಾಶ ಮಾಡಿಕೊಟ್ಟಿದ್ದು ಗುರುಶರಣ್ ಸಿಂಗ್. ಅವರಿಗೆ ಮಯಂಕ್ ಯಾದವ್ ಬೌಲಿಂಗ್‌ನ ವೇಗದ ಜೊತೆಗೆ ಹದವರಿತಂತೆ ಇರುವ ಲಯ ಬಲು ಇಷ್ಟ. ಚೆಂಡು ನೆಲಕ್ಕೆ ಬಿದ್ದ ಮೇಲೆ ಬ್ಯಾಟ್ಸ್‌ಮನ್‌ನ ಪ್ಯಾಡ್‌ಗೆ ಥಡ್ ಎಂದು ಬಡಿಯುವ ಸದ್ದು ಅವರ ಕಿವಿ ಮೇಲೆ ಪದೇ ಪದೇ ಬಿದ್ದಿದೆ. ಅವರು ಶಿಫಾರಸು ಮಾಡಿದ ಹುಡುಗ ಆಗ ವಿಜಯ್ ಹಜಾರೆ ಟ್ರೋಫಿಯ ಎರಡು ಪಂದ್ಯಗಳಲ್ಲಿ ಆರು ವಿಕೆಟ್‌ಗಳನ್ನು ಪಡೆದು, ನಂಬಿಕೆಯನ್ನು ಹುಸಿಯಾಗಿಸಿಲ್ಲವೆನ್ನುವುದು ಮುಖ್ಯ ಸಂಗತಿ. ಮರುವರ್ಷವೂ ವಿಜಯ್ ಹಜಾರೆ ಟ್ರೋಫಿಯಲ್ಲಿ ಮಯಂಕ್ ಹತ್ತು ವಿಕೆಟ್ ಕಿತ್ತರು.

ಈ ಸಲ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಮಯಂಕ್ ಆಡುತ್ತಿದ್ದಾರೆ. ಪಂಜಾಬ್ ಎದುರು ಆಡಿದ ಮೊದಲ ಪಂದ್ಯದ ಆಟವನ್ನು ನೆನಪಿಸಿಕೊಳ್ಳೋಣ. 102 ರನ್ ಗಳಿಸಿ ಒಂದೂ ವಿಕೆಟ್ ಕಳೆದುಕೊಳ್ಳದೆ ಆಡುತ್ತಿತ್ತು. ಆಗ ಫಲ ಕೊಟ್ಟಿದ್ದು ಮಯಂಕ್ ತಂತ್ರ. ಜಾನಿ ಬೇಸ್ಟೋ, ಪ್ರಭಸಿಮ್ರನ್ ಸಿಂಗ್ ಹಾಗೂ ಜಿತೇಶ್ ಶರ್ಮಾ ವಿಕೆಟ್‌ಗಳನ್ನು ಪಟಪಟನೆ ಕಿತ್ತರು. ಪಂಜಾಬ್ ಕಿಂಗ್ಸ್ ನೋಡನೋಡುತ್ತಲೇ ಹಿಂದಡಿ ಇಟ್ಟಿತು.

ಗ್ಲೆನ್ ಮಾಕ್ಸ್‌ವೆಲ್, ಕೆಮರೂನ್ ಗ್ರೀನ್ ಇಬ್ಬರನ್ನೂ ಆರ್‌ಸಿಬಿ ಎದುರಿನ ಪದ್ಯದಲ್ಲಿ ಬೀಟ್ ಮಾಡಿದ ಎಸೆತಗಳು ಅದ್ಭುತವಾಗಿ ಇದ್ದವು. ಇವನ್ನೂ ಕಂಡೇ ಸ್ಟೀವ್ ಸ್ಮಿತ್ ಅವರಿಗೆ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್, 'ಈ ಹುಡುಗ ಬರ್ತಾನೆ, ಹುಷಾರಾಗಿರಿ' ಎಂದು ಎಚ್ಚರಿಕೆ ನೀಡಿರುವುದು. ದಕ್ಷಿಣ ಆಫ್ರಿಕಾದ ಡೆಲ್ ಸ್ಟೇನ್ ಕೂಡ ಮಯಂಕ್ ಚೆಂಡನ್ನು ಆಫ್‌ಸ್ಟಂಪ್‌ನ ದಿಕ್ಕಿನತ್ತ ಸ್ಥಿರವಾಗಿ ಹಾಕುವುದನ್ನು ಮೆಚ್ಚಿಕೊಂಡಿದ್ದಾರೆ.

ಎಲ್ಲ ಖುಷಿಯ ಕ್ಷಣಗಳನ್ನೂ ಒಳಗಿಟ್ಟುಕೊಂಡು, ದೇಶಕ್ಕಾಗಿ ಆಡುವ ಬಯಕೆ ತನಗಿದೆ ಎಂದಿರುವ ಮಯಂಕ್ ಒಳಗೊಬ್ಬ ಗುರಿಕಾರನಂತೂ ಇದ್ದಾನೆ. ಮೈ ಕೈಗೆ ಗಾಯವಾಗದಂತೆ ಈ ಪ್ರತಿಭೆಯನ್ನು ಜತನವಾಗಿ ಇಟ್ಟುಕೊಳ್ಳಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in

